**ದಿನಾಂಕಃ 11-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಶ್ರೀ. ಎಸ್. ಕೆ, ವಕೀಲರಿಂದಃ-**

03. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆ. ಆರೋಪಿಯು ವ್ಯಾಪಾರವನ್ನು ಮಾಡಲು ನಿಮ್ಮ ಬಳಿ ಹಣವನ್ನು ಕೇಳಿದ್ದರು ಎಂದು ಹೇಳುವ ಬಗ್ಗೆ ನೀವು ದೂರು, ಮುಖ್ಯ ವಿಚಾರಣೆಯ ಪ್ರಮಾಣಪತ್ರ ಮತ್ತು ನಿಪಿ-3 ರಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಸದರಿ ವಿಷಯವನ್ನು ತಾನು ತನ್ನ ವಕೀಲರಿಗೆ ತಿಳಿಸಿದ್ದೇನೆ ಮತ್ತು ಅವರು ಅದರ ಬಗ್ಗೆ ಹೇಳಿರುವ ಬಗ್ಗೆ ತನಗೆ ಗೊತ್ತಿಲ್ಲ ಎನ್ನುತ್ತಾರೆ. ದಿ.15-08-2023 ರಂದು ನಿಮ್ಮ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣ ಇತ್ತು ಎಂದು ತೋರಿಸಲು ಸ್ಟೇಟ್‌ಮೆಂಟ್ ಅಫ್ ಅಕೌಂಟ್ ನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಮುಂದಿನ ದಿನಗಳಲ್ಲಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ದಿ.14-08-2023 ರಂದು ನಾನು ನನ್ನ ಬ್ಯಾಂಕ್ ಖಾತೆಯಿಂದ ಹಣವನ್ನು ಡ್ರಾ ಮಾಡಿರುತ್ತೇನೆ. ನಿಪಿ-1 ನ್ನು ಆರೋಪಿಯೇ ಬರೆದು ಅವರ ಮನೆಯಲ್ಲಿ ಇಟ್ಟಿದ್ದರು ಮತ್ತು ಅದನ್ನು ನನ್ನ ಬ್ಯಾಂಕ್ ಖಾತೆಗೆ ಹಾಜರುಪಡಿಸುವಂತೆ ಹೇಳಿ ನನಗೆ ನೀಡಿರುತ್ತಾರೆ. ಆರೋಪಿಯು ನಿಪಿ-1 ನ್ನು ನನ್ನ ಕಣ್ಣೆದುರು ಬರೆಯಲಿಲ್ಲ. ನಿಪಿ-1 ರಲ್ಲಿ ದಿ.13-12-2023 ರ ದಿನಾಂಕವನ್ನು ನಮೂದಿಸಲಾಗಿರುತ್ತದೆ. ನಿಮ್ಮ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದರೂ ಅದು ಬ್ಯಾಂಕಿನ ಮುಖಾಂತರವೇ ನಡೆಯುತ್ತಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಗದು ರೂಪದಲ್ಲೂ ಸಹ ವ್ಯವಹಾರವನ್ನು ಮಾಡಿದ್ದೇನೆ ಎನ್ನುತ್ತಾರೆ.

04. ಆರೋಪಿಯು ಕೋಳಿ ಅಂಗಡಿಯನ್ನು ಮಾಡಿದ್ದರು ಮತ್ತು ಅದರ ಹೆಸರು ಪ್ರಕೃತಿ ಚಿಕನ್ ಆಗಿದೆ. ಆರೋಪಿಯು ಕೋಳಿಯನ್ನು

ಖರೀದಿ ಮಾಡುವ ಸಲುವಾಗಿ ನಿಮ್ಮ ಬಳಿ ಹಣವನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಆರೋಪಿಯು ಕೋಳಿ ಮತ್ತು ಲಾರಿ ವ್ಯಾಪಾರವನ್ನು ಮಾಡುತ್ತಿದ್ದರು ಮತ್ತು ಅವರು ಯಾವ ವಿಷಯಕ್ಕಾಗಿ ನನ್ನ ಬಳಿ ಹಣವನ್ನು ಪಡೆದುಕೊಳ್ಳುತಿದ್ದರು ಎಂದು ತನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಆರೋಪಿಗೆ ನೀಡಿದ ಹಣಕ್ಕೆ ಆರೋಪಿಯು ಬಡ್ಡಿಯನ್ನು ಸೇರಿಸಿ ನಿಮಗೆ ಬ್ಯಾಂಕ್ ಖಾತೆಯ ಮುಖಾಂತರ ವರ್ಗಾವಣೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ತಾನು ನೀಡಿದ ಹಣವನ್ನು ಮಾತ್ರ ಆರೋಪಿಯು ತನಗೆ ನೀಡುತ್ತಿದ್ದರು ಎನ್ನುತ್ತಾರೆ. ನೀವು ಭದ್ರತೆಗೋಸ್ಕರ ನಿಪಿ-1 ನ್ನು ಆರೋಪಿಯಿಂದ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

05. ದಿ.06-09-2022 ರಂದು ರೂ. 9 ಸಾವಿರ, ದಿ.19-09-2022 ರಂದು ರೂ. 25 ಸಾವಿರ, ದಿ.22-10-2022 ರಂದು ರೂ. 25 ಸಾವಿರ, ದಿ.12-12-2022 ರಂದು ರೂ. 10 ಸಾವಿರ, ದಿ.17-01-2023 ರಂದು ರೂ.45 ಸಾವಿರ, ದಿ.28-01-2023 ರಂದು ರೂ.25 ಸಾವಿರ, ದಿ.02-02-2023 ರಂದು ರೂ.30 ಸಾವಿರ ಮತ್ತು ದಿ.02-03-2023 ರಂದು ನೀವು ನಿಮ್ಮ ಬ್ಯಾಂಕ್ ಖಾತೆಯಿಂದ ಆರೋಪಿಯ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾವಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ತಾನು ಫೋನ್ ಪೇ ಮುಖಾಂತರ ಒಂದು ಬಾರಿ ರೂ. 2,500/- ಮತ್ತು ಎರಡು ಬಾರಿ ರೂ. 30 ಸಾವಿರ ಹಣವನ್ನು ಆರೋಪಿಗೆ ಮತ್ತು ರೂ.25 ಸಾವಿರ ಮತ್ತು ರೂ.50 ಸಾವಿರ ಹಣವನ್ನು ಆರೋಪಿಯ ಯಜಮಾನರಿಗೆ ನೀಡಿದ್ದೇನೆ ಎಂದು ನುಡಿದಿರುತ್ತಾರೆ. ದಿ.17-10-2022 ರಂದು ರೂ. 10 ಸಾವಿರ, ದಿ.28-11-2022 ರಂದು ರೂ. 10 ಸಾವಿರ, ದಿ.18-12-2022 ರಂದು ರೂ. 5 ಸಾವಿರ , ದಿ.24-12-2022 ರಂದು ರೂ. 20 ಸಾವಿರ, ದಿ.14-

01-2023 ರಂದು ರೂ. 20 ಸಾವಿರ, ದಿ.18-01-2023 ರಂದು ರೂ. 10 ಸಾವಿರ, ದಿ.21-01-2023 ರಂದು ರೂ. 20 ಸಾವಿರ, ದಿ.22-01-2023 ರಂದು ರೂ. 5 ಸಾವಿರ, ದಿ.27-01-2023 ರಂದು ರೂ. 25 ಸಾವಿರ, ದಿ.30-01-2023 ರಂದು ರೂ.25 ಸಾವಿರ, ದಿ.02-02-2023 ರಂದು ರೂ.30 ಸಾವಿರ, ದಿ.20-02-2023 ರಂದು ರೂ. 4 ಸಾವಿರ, ದಿ.28-03-2023 ರಂದು ರೂ.10 ಸಾವಿರ, ದಿ.29-03-2023 ರಂದು ರೂ.15 ಸಾವಿರ, ದಿ.10-04-2023 ರಂದು ರೂ.15 ಸಾವಿರ, ದಿ.12-04-2023 ರಂದು ರೂ.10 ಸಾವಿರ ಮತ್ತು ದಿ.28-04-2023 ರಂದು ರೂ.15 ಸಾವಿರ ಹಣವನ್ನು ಆರೋಪಿಯು ಅವರ ಬ್ಯಾಂಕ್ ಖಾತೆಯಿಂದ ನಿಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.20-03-2023 ರಂದು ಆರೋಪಿಯು ಅವರ ಬ್ಯಾಂಕ್ ಖಾತೆಯಿಂದ ನಿಮ್ಮ ಬ್ಯಾಂಕ್ ಖಾತೆಗೆ ರೂ. 35 ಸಾವಿರ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಈ ಮೇಲೆ ಹೇಳಿರುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಭದ್ರತೆಗಾಗಿ ಆರೋಪಿಯು ನಿಮಗೆ ನಿಪಿ-1 ನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಿ.28-04-2023 ರಂದು ಆರೋಪಿಯು ನಿಮ್ಮ ಬಳಿ ನಿಪಿ-1 ನ್ನು ವಾಪಸ್ಸು ಕೊಡುವಂತೆ ಕೇಳಿದಾಗ ನೀವು ನಿಪಿ-1 ಮನೆಯಲ್ಲಿ ಇದೆ ಮತ್ತು ನಂತರ ಕೊಡುತ್ತೇನೆ ಎಂದು ಬೇಜವಾಬ್ದಾರಿಯ ಉತ್ತರವನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಆರೋಪಿಯು ತನಗೆ ಚೆಕ್ ನ್ನು ನೀಡಿರುವುದಿಲ್ಲ ಎನ್ನುತ್ತಾರೆ.

06. ನೀವು ನಿಪಿ-3 ರಂತೆ ಆರೋಪಿಗೆ ನೋಟಿಸ್ ನ್ನು ಕಳುಹಿಸಿದ ನಂತರ ಆರೋಪಿಯು ನಿಮ್ಮ ಮನೆಗೆ ಬಂದು ನಿಪಿ-1 ನ್ನು ವಾಪಸ್ಸು ಕೊಡುವಂತೆ ಕೇಳಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಆರೋಪಿಯು ನಿಮಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲದೇ ಇದ್ದರೂ ಸಹ ನೀವು ಆರೋಪಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈ ಮೇಲೆ ಹೇಳಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿಯು ನಿಮಗೆ ನಿಪಿ-1ನ್ನು ನೀಡಿದ್ದರೂ ಸಹ ನೀವು ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-1ರಲ್ಲಿ 3 ಲಕ್ಷ ಹಣವನ್ನು ನಮೂದಿಸಿ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ**

**ಮಾಗಡಿ**